ಅವರು ಕಾನನ್ ಡಾಯ್ಲನನ್ನು ಕನ್ನಡಕ್ಕೆ ಪರಿಚಯಿಸಿದರು. ಅವರ 'ಬೆಳ್ಳಿಚುಕ್ಕೆ', 'ಅಪರಾಧಿಗಳ ಸಂಶೋಧಕನು ಮರಣೋನ್ಮುಖವಾದದ್ದು' ಹಾಗೂ 'ವಿಸ್ಮಯ ಜನಕವಾದ ಹಿಂಸಾ ಕೃತಿ' ಎಂಬ ಕೃತಿಗಳು ಕನ್ನಡದಲ್ಲಿ ಪ್ರಕಟವಾದವು. ಕಾನನ್ ಡಾಯ್ಲನ ಕಾಲ್ಪನಿಕ ನಾಯಕ, ಜಗತ್‌ಪ್ರಸಿದ್ಧಿ ಪಡೆದ ಶರ್ಲಾಕ್ ಹೋಮ್ಸ್ ಮತ್ತು ಅವನ ಮಿತ್ರ ಡಾಕ್ಟರ್ ವ್ಯಾಟ್ಸನ್, ಕನ್ನಡದಲ್ಲಿ ಸರಲಾಕ್ಷ, ಹುಲಿಮೀಸೆಯಾಗಿ ಮೂಡಿಬಂದರು.

## ಮೂಲಭೂತ ಹಿನ್ನೆಲೆ

ಪತ್ತೇದಾರಿಗೆ ಪರ್ಯಾಯವಾಗಿ ಇನ್ನೂ ಅನೇಕ ಶಬ್ದಗಳಿವೆ.ಗೂಢಚರ್ಯೆ,ಬೇಹುಗಾರಿಕೆ,ಪರಿಶೋಧನೆ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಈ ಪತ್ತೇದಾರಿ ಅಥವಾ ಗೂಢಚರ್ಯೆ ಎಂಬುದು ನಮ್ಮ ಪುರಾತನ ಧರ್ಮಗ್ರಂಥಗಳಲ್ಲಿ ತನ್ನ ಅಸ್ತಿತ್ವ ತೋರಿಸಿದೆ ಎಂಬುದಕ್ಕೆ ಅನೇಕ ಉಲ್ಲೇಖಗಳಿವೆ. ರಾಮಾಯಣ, ಮಹಾಭಾರತಗಳಲ್ಲಿ ಬೇಹುಗಾರರು, ಗೂಢಚಾರರು ತುಂಬಿಹೋಗಿದ್ದಾರೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅವರ ಶೋಧಕಾರ್ಯಕ್ಕೆ ದುರ್ಯೋಧನ ಸಾವಿರಾರು ಬೇಹುಗಾರರನ್ನು ಕಳಿಸಿದ್ದ ಎಂಬ ವಿಷಯ ಸ್ಪಷ್ಟವಾಗುತ್ತದೆ. ಅದರಂತೆ ರಾಮಾಯಣ ಮಹಾಗ್ರಂಥದಲ್ಲೂ ಅಪಹೃತವಾದ ಸೀತೆಯನ್ನು ಹುಡುಕಲು ನೂರಾರು, ಸಾವಿರಾರು ವಾನರರು ತಂಡ ತಂಡವಾಗಿ ಗೂಢಚಾರಿಗಳ ರೂಪದಲ್ಲಿ ಹೊರಟರು ಎಂಬ ವಿಷಯ ವಿದಿತವಾಗಿದೆ.

ಇವೆಲ್ಲವನ್ನೂ ಮೀರಿಸಿ ಭಾಗವತ ಪುರಾಣದಲ್ಲಿ 'ಪ್ರಣಿವಿ' ಎಂಬ ಶಬ್ದ ಪ್ರಯೋಗ ಗಮನ ಸೆಳೆಯುತ್ತದೆ. ಗುಪ್ತಚರ್ಯೆಗೆ ಸಂಬಂಧಿಸಿದಂತೆ ಬೇರೆ ಬೇರೆ ಸಂಹಿತೆ ಮತ್ತು ವ್ಯವಸ್ಥೆಗಳಲ್ಲಿ ಈ ಶಬ್ದ 'ಕಂಡುಹಿಡಿಯುವಿಕೆ', 'ಶೋಧ', 'ನಿರ್ಣಯ', ಎಂಬ ವಿವಿಧ ಅರ್ಥಗಳನ್ನು ಕೊಡುತ್ತದೆ. ಪ್ರಾಚೀನ ರಾಜ್ಯಾಡಳಿತದಲ್ಲಿ ಗುಪ್ತಚರ ಕಾರ್ಯವು ಕೇವಲ ತಂತ್ರವಾಗಿರದೆ ಸಂಹಿತೆಯೇ ಆಗಿತ್ತು. ಇದಕ್ಕೆ ಸಾಕ್ಷಿಯಾಗಿ 'ಮನುಸ್ಮೃತಿ' ಹಾಗೂ 'ಯಾಜ್ಞವಲ್ಕ ಸ್ಮೃತಿಗಳು' ನಮ್ಮೆದುರು ಇವೆ. ಇವುಗಳಲ್ಲಿ ಅಂದಿನ ಸಮಾಜವನ್ನು ಅಪರಾಧ ಮತ್ತು ಅಪರಾಧಿಗಳಿಂದ ರಕ್ಷಿಸುವ ಕುರಿತು ಅಪರಾಧಿಯ ಶೋಧನೆಯ ವಿವರಣೆಗಳಿವೆ. ಅವುಗಳ ನವೀನ ರೂಪಗಳೇ ಇಂದಿನ ಸಿ.ಐ.ಡಿ., ಸಿ.ಬಿ.ಐ., ಸಿ.ಐ.ಎ., ಇಂಟರ್‌ಪೋಲ್ ಮುಂತಾದ ಸಂಸ್ಥೆಗಳು. ಮಹಾಮುತ್ಸದ್ಧಿ, ರಾಜಕಾರಣಿ ಚಾಣಕ್ಯನ ಕಾಲದಲ್ಲಂತೂ, ಗುಪ್ತಚರ್ಯೆ ವಿಭಾಗ ಸದಾಕಾಲ ಅತ್ಯಂತ ಜಾಗೃತವಾಗಿರುತ್ತಿತ್ತು ಎಂಬುದನ್ನು ಇತಿಹಾಸ ಇಂದಿಗೂ ಸಾರಿಹೇಳುತ್ತದೆ. ಶವಪರೀಕ್ಷೆ, ಮರಣೋತ್ತರ ಪರೀಕ್ಷೆಗಳಂಥ ಆಧುನಿಕ ವೈದ್ಯ ವಿಜ್ಞಾನ ಅಂದೇ ಬಳಕೆಯಲ್ಲಿತ್ತು ಎಂಬುದೂ ಸ್ಪಷ್ಟವಾಗುತ್ತದೆ. ಶತ್ರುಗಳನ್ನು ಸುಂದರವಾದ ರೇಶಿಮೆ ಬಲೆಯಲ್ಲಿ ಸಿಲುಕಿಸಿ ಯಮಪುರಿಗೆ ಕಳಿಸುವ ತಂತ್ರದ 'ವಿಷಕನ್ಯೆಯರು' ಆಧುನಿಕ ಯುಗದಲ್ಲಿ 'ಲೇಡೀ ಸ್ಪೈ' ರೂಪದಲ್ಲಿ ಇಂದೂ ಜೀವಂತವಾಗಿದ್ದಾರೆ. ಸಾಮ್ರಾಟ್ ಅಶೋಕನ ಕಾಲದಲ್ಲಿ ಅಪರಾಧಿಗಳ ಬಾಯಿ ಬಿಡಿಸಲು ಅವರಿಗೆ ನೀಡುವ ಭಯಾನಕ ಹಿಂಸೆಗಳ ಪ್ರತ್ಯೇಕ ಕೊಠಡಿಗಳಿದ್ದವು ಎಂಬುದು ಜಿ.ಪಿ. ರಾಜರತ್ನಂ ಅವರ 'ಚಂಡಾಲೋಕ' ಕೃತಿಯಿಂದ ತಿಳಿದು ಬರುತ್ತದೆ. ಅಂದಿನ ಯಮಹಿಂಸೆಗಳು ಇಂದಿನ ಪೊಲೀಸ್ ಇಲಾಖೆಯ ಮುಖ್ಯ ಅಸ್ತ್ರಗಳಾಗಿ 'ಥರ್ಡ್‌ಡಿಗ್ರಿ ಟ್ರೀಟ್‌ಮೆಂಟ್' ಎಂದು ಪ್ರಸಿದ್ಧಿ ಪಡೆದಿವೆ.

ಜಗದ್ಗುರು ಶ್ರೀ ಶಂಕರಾಚಾರ್ಯರ, ಶ್ರೀ ಮಧ್ವಾಚಾರ್ಯರ ಉಪದೇಶ ಕೃತಿಗಳಲ್ಲೂ ಪತ್ತೇದಾರಿ ತನ್ನ 'ಇರುವನ್ನು' ತೋರಿಸುತ್ತದೆ. ಶಂಕರಾಚಾರ್ಯರ 'ಪರಕಾಯ ಪ್ರವೇಶ', 'ಬ್ರಹ್ಮಚರ್ಯ ಪ್ರಸಂಗ' ಅವರು ತಮ್ಮ ತಾಯಿಗೆ ನೀಡಿದ 'ಸುಗುಣೋಪಾಸಕ ಉಪದೇಶ' ಹಾಗೂ ಶ್ರೀ ಮಧ್ವರು ಜೀವನದಲ್ಲಿ ವೇದ ಪ್ರಮಾಣಕ್ಕಾಗಿ, ಪ್ರಕಟಿಸಿದ 'ಚಮತ್ಕಾರಿಕ ಘಟನೆಗಳು' ಅವರಿಬ್ಬರ ಅಪಾರ ಜ್ಞಾನ, ತಿಳಿವಳಿಕೆ ಪ್ರದರ್ಶಿಸುವುದರೊಂದಿಗೆ ಅತ್ಯಂತ ರಹಸ್ಯಮಯವಾದ ಜಗತ್ತನ್ನು ತೆರೆದು ನಮ್ಮ ಮುಂದಿಡುತ್ತವೆ. ಶ್ರೀ ರಾಮಾನುಜರ ಗೀತಭಾಷೆಯಲ್ಲಿ ಬರುವ ಪ್ರಥಮ ಶ್ಲೋಕಗಳು ಧೃತರಾಷ್ಟ್ರನ ಬಹಿರಂಗ ಹಾಗೂ ಅಂತರಂಗ ಅಂಧತ್ವವನ್ನು 'ಮಾವುಕ' ಎಂದು ಉಲ್ಲೇಖಿಸಿ ಶ್ರೀಕೃಷ್ಣನ ಅಪರಿಮಿತ ಶಕ್ತಿಯನ್ನು ನಿರೂಪಿಸಿದ್ದಾರೆ. ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧದ ವರ್ಣನೆಯನ್ನು ಸಂಜಯ ಧೃತರಾಷ್ಟ್ರನಿಗೆ ಕಣ್ಣಿಗೆ ಕಟ್ಟಿದಂತೆ ಹೇಳುತ್ತಿರುವಾಗ ಇಂದಿನ ಟಿ.ವಿ. ನಮ್ಮೆದುರು ಬಂದು ನಿಲ್ಲುತ್ತದೆ. ವೈದಿಕ ವಾಙ್ಮಯದ ಉಪದೇಶಗಳ